ಲಾರಿಗಳ ತುಂಬಾ ದನಗಳ ಮೈ ಕಮಟು ವಾಸನೆ ಜೊತೆಗೆ ತೀರ್ಥಪ್ರಸಾದದ ಘಮಲು. ಸೊರಬರ ಉಸಿರಾಟ 'ಅಂಬಾ' ಎಂಬ ಅರಚಾಟ ಕೇಳಿಯೇ ಕಣ್ಣೀರಾದರು. ಪೊಲೀಸರು ಸರಿಯಾಗಿ ಬಡಿಯುತ್ತಾರೋ ಇಲ್ಲವೋ ಎಂಬ ಗುಮಾನಿಯ ಮೇಲೆ ತಾವೇ ಮತ್ತೊಂದು ರೌಂಡ್ ಡ್ರೈವರ್, ಕ್ಲೀನರ್‌ನನ್ನು ಚಚ್ಚಿದರು. ಠಾಣೆಗೆ ಲಾರಿಗಳ ಸಮೇತ ತಂದಾಗ ಪೇದೆಗಳ ನಿದ್ರಾಭಂಗವಾಗಿತ್ತು. ಲಾರಿಗಳನ್ನು ಠಾಣೆಯ ದೊಡ್ಡ ಕಾಂಪೌಂಡಿನಲ್ಲಿ ನಿಲ್ಲಿಸಿ ದನಗಳನ್ನು ಇಳಿಸಿದರು. ಅದರಲ್ಲಿ ಎತ್ತುಗಳು ಆಕಳುಗಳು ಕರುಗಳೂ ಇದ್ದವು. ಹಲವು ಟಿ.ಬಿ. ಪೇಷಂಟುಗಳಂತೆ ಮೂಳೆ ಚಕ್ಕಳ ಬಿಟ್ಟುಕೊಂಡಿದ್ದವು. ಕೆಲವು ಪೊಗದಸ್ತಾಗಿದ್ದವು. ಮೋಟುಗಿಡ್ಡುಗಳು ಕಂಡವು. ಕೆಲವಕ್ಕೆ ಎಷ್ಟು ವಯಸ್ಸಾಗಿತ್ತೋ ಅಂದಾಜು ಮಾಡಲಾಗದಿದ್ದರೂ ಅವುಗಳು ನಿಲ್ಲಲಾಗದೆ ನೆಲಕಚ್ಚಿ ಒಂದು ಬದಿಗೆ ಉರುಳುತ್ತಾ 'ಅಂಬಾ' ಎಂದು ಕರ್ಕಶವಾಗಿ ಆರ್ತನಾದ ಮಾಡುವಾಗ ಹಿಂ.ಜ.ತ.ಸೇನೆಯವರು ಮಮ್ಮಲ ಮರುಗಿ, 'ಇವಕ್ಕೆ ಹುಲ್ಲು ನೀರು ಮೊದ್ಲು ವ್ಯವಸ್ಥಾ ಮಾಡ್ರೀ' ಎಂದು ಪೇದೆಗಳನ್ನು ಗದರಿದರು. ಸುದ್ದಿ ತಿಳಿದು ಕಣ್ಣುಜ್ಜುತ್ತಾ ವಸತಿಗೃಹದಿಂದ ಓಲಾಡುತ್ತಾ ಬಂದ ಎಸ್.ಐ. ಮಾದೇವಯ್ಯ ದನಗಳನ್ನು ಲೆಕ್ಕ ಮಾಡಿ ದಿಗಿಲುಬಿದ್ದ. 'ಮೂವತ್ತು ರಾಸುಗಳಾದವಲ್ರಿ' ಎಂದು ಸೇನಾಪಡ್ಡೆಗಳತ್ತ ಕೆಂಗಣ್ಣುಬಿಟ್ಟ. 'ಅದೇ ಕಣ್ರಿಸಾ ಹೆಂಗೆ ಲಾರಿನಾಗೆ ತುಂಬಿದಾರೆ ನೋಡ್ರಿ. ಹ್ಯೂಮಾನಿಟಿ ಬ್ಯಾಡವೇನ್ರಿ ಈ ನನ್ಮಕ್ಳಿಗೆ? ಗೋಹತ್ಯೆ ಮಾಡ್ಲಿಕ್ಕೆ ಹೊಂಟಾರಲ್ರಿ' ಎನ್ನುತ್ತ ಸೇನಾಪಡ್ಡೆಗಳು ಗದ್ದಲಕ್ಕೆ ನಿಂತಾಗ ಎಸ್.ಐ. ತಣ್ಣಗಾಗಿ, 'ಕೇಸ್ ಮನೆ ಹಾಳಾಗ್ಲಿ. ಇವನ್ನ ಹೆಂಗ್ರಿ ಸಂಭಾಳಿಸೋದು' ಎಂದು ಹತಾಶನಾದ. 'ಅದನ್ನೆಲ್ಲಾ ಇಲ್ಲಿ ಯಾನನ್ಮಗನಿಗೆ ಹೇಳ್ತಿರ್ರೀ? ಮೊದಲು ಈ ನನ್ಮಕ್ಳನ್ನ ಅರೆಸ್ಟ್ ಮಾಡಿ ಒಳಗ್ಹಾಕಿ ಕೇಸ್ ಜಡೀರಿ. ಏಯ್ ಮೊದಲು ಸಿಟಿಗೋಗಿ ನ್ಯೂಸ್ ಚಾನೆಲ್‌ನೋರ್ನ, ಪೇಪರ್‌ನೋರ್ನ ಕರ್ಕಂಬಾರ್ಲಾ' ಎಂದು ಸೇನೆಯ ಮುಖ್ಯಸ್ಥ ಒಂದು ರೇಂಜಿಗೆ ಕೂಗಾಡಿದ. ಅವರನ್ನು ಸಮಾಧಾನ ಪಡಿಸಲು ಎಸ್.ಐ.ಮಾದೇವಯ್ಯ ಅವರ ಎದುರಿಗೇ ಮೂಲೆ ಹಿಡಿದು ನಿಂತಿದ್ದ ಡ್ರೈವರು, ಕ್ಲೀನರ್‌ನ ಕಾಲರ್ ಹಿಡಿದು ತದುಕಿ ಸೆಲ್ ಒಳಗೆ ದಬ್ಬಿದರು. ಯುದ್ಧವನ್ನು ಗೆದ್ದವರಂತೆ 'ಜೈರಾಮಾ ಜೈ ಗೋಮಾ' ಎಂದು ಕೂಗುತ್ತಾ ಸಾಗಿದ ಪಡ್ಡೆಗಳು ಮನೆ ಸೇರಿ ರಗ್ ಹೊದ್ದುಬಿದ್ದುಕೊಂಡವು. ಆದರೆ ಚಾನೆಲ್, ಪತ್ರಿಕೆಗಳು ಮೊಬ್ಬಳ್ಳಿ ಠಾಣೆಯವರಿಗೆ ಒಂಥರಾ 'ವಾರ್ನ್' ಮಾಡುತ್ತಾ ಹಿಂ.ಜ.ತ. ಸೇನಾ ಪಡೆಗಳ ಸಾಹಸವನ್ನು ಕೊಂಡಾಡುತ್ತಾ ಯಾವುದೋ ಇನ್ನೊಂದು ಸೆನ್ಸೇಶನಲ್ ನ್ಯೂಸ್ ಬರುವವರೆಗೂ ದಿನವಿಡೀ ಮತ್ತೆ ಮತ್ತೆ ರಿಪೀಟ್ ಮಾಡುತ್ತಾ ನೋಡುಗರ ತಲೆ ಕೈಮಾ ಮಾಡಿದರು.

ಕೋರ್ಟ್‌ನಲ್ಲಿ ಕೇಸೂ ಆಯಿತು. ಡ್ರೈವರ್ ಕ್ಲೀನರ್‌ಗೆ ಜಾಮೀನೂ ಸಿಕ್ಕಿತು. ಲಾರಿಗಳೂ ಮಾಲೀಕರ ಕೈಸೇರಿದವು. ಆದರೆ ಮೂವತ್ತು ದನಗಳು ಮಾತ್ರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲೇ ಸೆಟ್ಲ್ ಆದವು. ಅವುಗಳನ್ನು ಸಾಕಿ ಸಲಹುವುದು ಅದೆಷ್ಟು ಕಷ್ಟವೆಂಬ ಜ್ಞಾನೋದಯವಾಗುತ್ತಲೇ ರೈತನೆಂಬ ಸಹನಾಮೂರ್ತಿ ಪ್ರಾಣಿ ಪ್ರೇಮಿ ದಯಾಪ್ರೇಮಿ ಪೊಲೀಸರಿಗೆ ನೆನಪಾದ. ಅಷ್ಟೊಂದು ಜಾನುವಾರುಗಳಿಗೆ ಮೇವು ನೀರು ಒದಗಿಸುವುದೇನು ಹುಡುಗಾಟವೆ? ಮೊದಮೊದಲು ಗೌಡರ ಹುಕುಂ ಮೇರೆಗೆ ಊರಿನ ಒಂದಷ್ಟು ರೈತರು ಮನೆಬಾಗಿಲ ಮುಂದೆ ಬಂದು ಭಿಕ್ಷಕರಂತೆ ನಿಂತು 'ಅಂಬಾ' ಎನ್ನುವ ತೆರದಿ 'ಸ್ವಾಮಿ' ಅಂಬೋ ಪೇದೆಗಳ ಕೈಗೆ ಒಂದಷ್ಟು ಹುಲ್ಲುಹೊರೆ ಎತ್ತಿಹಾಕಿದರು. ಬೈದುಕೊಳ್ಳುತ್ತಲೇ ಸೆಪ್ಪೆ ಕೊಟ್ಟರು. ಬಣವೆಯಲ್ಲಿ ಒಂದಿಷ್ಟು ಕಿತ್ತು ಬಿಸಾಡಿದರು. ಆಮೇಲಾ ಮೇಲೆ ಮನೆಹೆಣ್ಣುಮಕ್ಕಳು ಪೇದೆ